**<u>ಅಮಲ್ಜಾರಿ 92/2022 ಪಿ.ಡಬ್ಲೂ-1 ಹೆಸರು – ಎ.ಎಸ್. ಬಾಲಸುಬ್ರಮಣ್ಯಂ</u>**

**ಸಾಕ್ಷಿಯನ್ನು ದಿನಾಂಕಃ 15.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ತೀರ್ಪುಋಣಿಗಳ ಪರ ಶ್ರೀ ಬಿ.ವೈ ವಕೀಲರಿಂದಃ</u>**

ಓ.ಎಸ್. 326/2014 ರಲ್ಲಿ ತೀರ್ಪು ಮತ್ತು ಡಿಕ್ರಿಯನ್ನು ಒಟ್ಟು 3 ಎಕರೆ 31 ಗುಂಟೆ ಗೆ ಸಂಬಂಧಿಸಿದಂತೆ ಪಡೆಯಲಾಗಿದೆ. ನಾವು ಸದರಿ 3 ಎಕರೆ 31 ಗುಂಟೆ ಜಮೀನಿನಲ್ಲಿ ಮಾತ್ರ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ. ಸದರಿ ವಿಸ್ತೀರ್ಣದ ಸ್ವತ್ತಿಗೆ ಬೇಲಿ ಹಾಕಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ತಂತಿ ಬೇಲಿ ಹಾಗೂ ಮರದ ಗೇಟ್ ಅಳವಡಿಸಲಾಗಿದೆ. ಸದರಿ ತಂತಿ ಬೇಲಿ ಪೂರ್ವ-ಪಶ್ಚಿಮವಾಗಿ ಇರುತ್ತದೆ. ತಂತಿ ಬೇಲಿ ಅಳವಡಿಸಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಗೂ ಫೋಟೋಗಳನ್ನು ಹಾಜರುಪಡಿಸಿರುತ್ತೇನೆ. ನಮ್ಮ ಜಮೀನಿನ ಪಶ್ಚಿಮಕ್ಕೆ ಶಿವರಾಮು ರವರ ಸರ್ವೆ ನಂ. 2 ಇದೆ ಎಂದರೆ ಸರಿ. ಸದರಿ ಶಿವರಾಮು ರವರು ಅವರ ಸ್ವತ್ತಿನ ದಕ್ಷಿಣ ಭಾಗಕ್ಕೆ ತಂತಿ ಬೇಲಿ ಹಾಕಿಕೊಂಡಿದ್ದಾರೆ ಎಂದರೆ ಸರಿ. ಅರ್ಜಿ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂ. 5 ಇದೆ ಎಂದರೆ ಸರಿ. ಸರ್ವೆ ನಂ. 2 ರಲ್ಲಿ 2 ಎಕರೆ 6 ಗುಂಟೆ ಮಾತ್ರ ಶಿವಪ್ಪ ಎಂಬುವವರಿಗೆ ನಾವು ಮಾರಾಟ ಮಾಡಿದ್ದು ಉಳಿದ 2 ಗುಂಟೆ ಜಮೀನನ್ನು ಸರ್ವೆ ನಂ. 4 ಕ್ಕೆ ಹೋಗಲು ಉಳಿಸಿಕೊಂಡಿರುತ್ತೇವೆ. ಸದರಿ 2 ಗುಂಟೆ ಉಳಿಸಿಕೊಂಡಿರುವ ಬಗ್ಗೆ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಪ್ರಸ್ತುತ 3 ಎಕರೆ 30 ಗುಂಟೆ ಜಮೀನು ಮಾತ್ರ ಇದ್ದು ನಾನು ಹೆಚ್ಚುವರಿ ಖಾತೆ ಮಾಡಿಸಿಕೊಂಡಿರುವುದಿಲ್ಲ. 6 ಗುಂಟೆ ಜಮೀನು ಏನಾಯಿತು ಎಂದು ನನಗೆ ಗೊತ್ತಿಲ್ಲ. ಉಳಿಕೆ 6 ಗುಂಟೆ ಜಮೀನು ನಮ್ಮ ಜಮೀನಿನ ದಕ್ಷಿಣಕ್ಕೆ ಇದೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ಸರ್ಕಾರಿ ಕರಾಬು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕರಾಬಿನ ಮೂಲಕವೇ ನಿಜಗುಣರವರು ತಮ್ಮ ಜಮೀನಿಗೆ ಹೋಗಿ ಬಂದು ಮಾಡುತ್ತಾರೆ ಎಂದರೆ ಸರಿಯಲ್ಲ. ನಿಜಗುಣರವರ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದರೆ ಸಾಕ್ಷಿ ಇರಬಹುದು ಎನ್ನುವರು. ನಿಜಗುಣ ರವರ ಸ್ವತ್ತಿನ ಸರ್ವೆ ನಂ. 95 ಎಂದರೆ ಸರಿ. ಸದರಿ ಸ್ವತ್ತಿನ ಪೂರ್ವಕ್ಕೆ ನೀರಿನ ಕಟ್ಟೆ ಇದೆ ಎಂದರೆ ಸರಿಯಲ್ಲ. ನಾವು ಮತ್ತು ಬಾಜುದಾರರು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. ತೀರ್ಪುಋಣಿಗಳು ನ್ಯಾಯಾಲಯದ ಆದೇಶವನ್ನು ಉಲ್ಲಂಘಣೆ ಮಾಡಿರುವ ಬಗ್ಗೆ ಬಾಜುದಾರರನ್ನು ಕರೆದುಕೊಂಡು ಬಂದು ವಿಚಾರಣೆ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ.

ನಿಜಗುಣ ಮತ್ತು ಇತರರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಅದರಲ್ಲಿ ನನ್ನ ವಿಚಾರಣೆಯಾಗಿದೆ ಎಂದರೆ ಸರಿ. ಉಳಿದ ಸಾಕ್ಷಿದಾರರ ವಿಚಾರಣೆಯಾಗಿದೆ ಎಂದರೆ ಸರಿ. ಸಿದ್ದಪ್ಪ ಮತ್ತು ಶಿವಪ್ಪನವರ ವಿಚಾರಣೆಯೂ ಸಹ ಆಗಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಮತ್ತು ಇತರೇ ಸಾಕ್ಷಿದಾರರು ಪ್ರತಿಕೂಲ ಸಾಕ್ಷಿಯನ್ನು ನುಡಿದಿದ್ದೇವೆ ಎಂದರೆ ಸರಿಯಲ್ಲ. ನಾಗಲಿಂಗಪ್ಪನವರೂ ಹಾಗೂ ನಾವು ಅನ್ಯೋನ್ಯವಾಗಿದ್ದು, ಅವರನ್ನು ಕರೆದುಕೊಂಡು ಬಂದು ವಿಚಾರಣೆ ಮಾಡಬಹುದು. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ಯಾರಾ 5 ರಲ್ಲಿ ತಿಳಿಸಿರುವಂತೆ ನಾಗಲಿಂಗಪ್ಪನವರು ಒತ್ತುವರಿ ಜಮೀನನ್ನು ನನ್ನ ಸ್ವಾಧೀನಕ್ಕೆ ಬಿಟ್ಟುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಗಳನ್ನು ಮಾಡಿಕೊಂಡಿದ್ದೇನೆ. ಅವರು ಬಿಟ್ಟುಕೊಟ್ಟ ನಂತರ ನಾವು ಬೇಲಿ ಹಾಕಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಸ್ವತ್ತಿಗೆ ತಂತಿ ಬೆಲಿ ಹಾಕಿಲ್ಲ, ಬದಲಿಗೆ ಶಿವರಾಮು ರವರು ಅವರ ಸ್ವತ್ತಿನ ಪಶ್ಚಿಮಕ್ಕೆ ತಂತಿ ಬೇಲಿ ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಭಾವಚಿತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ನಿಜಗುಣ ರವರ ಕೆಲಸಗಾರರು ತಡೆಯಾಜ್ಞೆಯನ್ನು ಉಲ್ಲಂಘಿಸಿ ಹೋಗುತ್ತಿರುವ ಭಾಗ ಚಿತ್ರ ಎಂದು ಗುರುತಿಸಿದ್ದು ಅದನ್ನು ನಿ.ಡಿ 1 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ಕಾಣಿಸುವ ಬೇಲಿ ಶಿವರಾಮು ರವರ ಸ್ವತ್ತಿಗೆ ಅಳವಡಿಸಿರುವ ತಂತಿ ಬೇಲಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ನನ್ನ ಸ್ವತ್ತಿಗೆ ಅಳವಡಿಸಿರುವ ತಂತಿ ಬೇಲಿ ಎನ್ನುವರು. ಸಾಕ್ಷಿಗೆ ಮತ್ತೊಂದು ಭಾವ ಚಿತ್ರವನ್ನು ತೋರಿಸಲಾಗಿ ಅದರಲ್ಲಿ ಕಾಣಿಸುವ ಮರ ಹಾಗೂ ಹುಲ್ಲಿನ ಮೆದೆ ಇರುವಂತಹ ಜಮೀನು ನಾಗಲಿಂಗಪ್ಪನವರ ಜಮೀನು ಎಂದು ಒಪ್ಪಿಕೊಂಡಿದ್ದು ಸಾಕ್ಷಿ ಮುಂದುವರೆದು ಎಡಭಾಗದಲ್ಲಿ ಕಾಣಿಸುವಂತಹ ಜಮೀನು ನನಗೆ ಸೇರಿದ ಸ್ವತ್ತಾಗಿದ್ದು ಅದರಲ್ಲಿ ವಾಹನ ಓಡಾಡಿರುವಂತೆ ಕಾಣಿಸುವ ಭಾಗವನ್ನು ತೀರ್ಪುಋಣಿಗಳು ತಡೆಯಾಜ್ಞೆಯನ್ನು ಉಲ್ಲಂಘಿಸಿ ಮಾಡಿರುವುದು ಎಂದು ತಿಳಿಸಿದ್ದು, ಆದಕಾರಣ ಸದನ್ನು ನಿ.ಡಿ 2 ಎಂದು ಗುರುತಿಸಲಾಯಿತು. ಸದರಿ ದಾರಿಯಂತೆ ಕಾಣಿಸುವ ವಸ್ತು ಉಳಿಕೆ 6 ಗುಂಟೆ ಜಮೀನಾಗಿದ್ದು ತೀರ್ಪುಋಣಿಗಳು ಅವರ ತಾತನ ಕಾಲದಿಂದಲೂ ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಆರ್.ಟಿ.ಸಿ ಯಲ್ಲಿ ಸರ್ವೆ ನಂ. 4 ಕ್ಕೆ 3 ಎಕರೆ 37 ಗುಂಟೆ ಇದ್ದಿದ್ದನ್ನು ತೀರ್ಪುಋಣಿಗಳು ಅರ್ಜಿ ನೀಡಿ 6 ಗುಂಟೆ ಹೆಚ್ಚುವರಿಯನ್ನು

ತೆಗೆಸಿ ಹಾಕಿರುತ್ತಾರೆ ಎಂದರೆ ಸಾಕ್ಷಿ 1969 ರಿಂದ ಸರ್ವೆ ನಂ. 4 ರಲ್ಲಿ ಕೇವಲ 3 ಎಕರೆ 31 ಗುಂಟೆ ಮಾತ್ರ ಇದ್ದು ಹೆಚ್ಚುವರಿ ಜಮೀನು ಇದ್ದಲ್ಲಿ ತೀರ್ಪುಋಣಿಗಳೇ ತೆಗೆದುಕೊಳ್ಳಲಿ ನನಗೆ ಯಾವುದೇ ಅಭ್ಯಂತರ ಇಲ್ಲ ಎನ್ನುವರು. ಅವರು ಅರ್ಜಿ ನೀಡಿ 6 ಗುಂಟೆ ಜಮೀನನ್ನು ತೆಗೆಸಿದ ಕಾರಣ ಅವರಿಗೂ ಹಾಗೂ ನಮಗೂ ವೈಮನಸ್ಸು ಇದೆ ಎಂದರೆ ಸರಿಯಲ್ಲ.

ನಾನು ತಂತಿ ಬೇಲಿ ಹಾಕಿಕೊಳ್ಳುವ ಸಮಯದಲ್ಲಿ ನಾಗಲಿಂಗಪ್ಪನವರು ಅದಕ್ಕೆ ಅವಕಾಶ ನೀಡಿಲ್ಲ ಎಂದರೆ ಸಾಕ್ಷಿ ನಾಗಲಿಂಗಪ್ಪ ಹಾಗೂ ತೀರ್ಪುಋಣಿದಾರರು ಇಬ್ಬರೂ ಸಹ ಅಡ್ಡಿ ಪಡಿಸಿರುತ್ತಾರೆ ಎನ್ನುವರು. ನಾನು ಕರಾಬನ್ನು ಸೇರಿಸಿ ತಂತಿ ಬೇಲಿ ಹಾಕಿಕೊಳ್ಳಲು ಪ್ರಯತ್ನ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಓಡಾಡಿನ ಕರಾಬು ಸ್ವತ್ತಿಗೆ ನನಗೆ ಗೇಟು ನಿರ್ಮಿಸುವ ಹಕ್ಕು ಇಲ್ಲ ಎಂದರೆ ಸಾಕ್ಷಿ ಅಲ್ಲಿ ಯಾವುದೇ ಕರಾಬಿನ ಸ್ವತ್ತು ಇಲ್ಲ ಎನ್ನುವರು. 6 ಗುಂಟೆ ಜಮೀನು ಬಂಡಿ ದಾರಿ ಎಂದು ನಕಾಶೆಯಲ್ಲಿ ತೋರಿಸಲಾಗಿದೆ ಎಂದರೆ ಸರಿಯಲ್ಲ. ನಾನು ಸಹ ನನ್ನ ಜಮೀನಿಗೆ ಹೋಗಲು ಸದರಿ ಪ್ಯಾಸೇಜ್ ಅನ್ನು ಬಳಸುತ್ತೇನೆ ಎಂದರೆ ಸಾಕ್ಷಿ ಅದು ಪ್ಯಾಸೇಜ್ ಅಲ್ಲ, ಅದು ನನಗೆ ಸೇರಿದ 2 ಗುಂಟೆ ಜಮೀನು ಎನ್ನುವರು. ನನಗೆ ಅಲ್ಲಿ ಯಾವುದೇ 2 ಗುಂಟೆ ಜಮೀನು ಇಲ್ಲ ಎಂದರೆ ಸರಿಯಲ್ಲ. ನಿರ್ಬಂಧಕಾಜ್ಞೆ ಆದೇಶ ಬಂಡಿ ದಾರಿಗೆ ಅನ್ವಯಿಸುವುದಿಲ್ಲ ಎಂದರೆ ಸಾಕ್ಷಿ ಅಲ್ಲಿ ಯಾವುದೇ ಬಂಡಿ ದಾರಿ ಇಲ್ಲ ಎನ್ನುವರು. ಅಸಲು ದಾವಾ ಸಂಖ್ಯೆ ಮೇಲೆ ಸಲ್ಲಿಸಿರುವ ಅಪೀಲು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದೆ ಎಂದರೆ ಸರಿ. ಇದೇ ವಿಚಾರವಾಗಿ ನಾನು ತೀರ್ಪುಋಣಿಗಳ ವಿರುದ್ಧ ಸಿ.ಆರ್.ಪಿ ಕಲಂ 107 ರಡಿಯಲ್ಲಿ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸಾಕ್ಷಿ ನಾನು ಪೊಲೀಸರಿಗೆ ದೂರು ನೀಡಿದ್ದು ಅವರು ಪ್ರಕರಣ ದಾಖಲಿಸಿದ್ದಾರೆ ಎನ್ನುವರು. ಸದರಿ ಪ್ರಕರಣ ವಜಾಗೊಂಡಿದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಖಂಡಿಕೆ 6 ರಲ್ಲಿ ತಿಳಿಸಿರುವಂತೆ ತೀರ್ಪುಋಣಿಗಳು ನಮಗೆ ಯಾವುದೇ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ಖಂಡಿಕೆ 6 ರಲ್ಲಿ ತಿಳಿಸಿರುವಂತೆ ತೀರ್ಪುಋಣಿಗಳು ನ್ಯಾಯಾಲಯದ ಆದೇಶದ ಉಲ್ಲಂಘಣೆ ಮಾಡಿದ್ದಾರೆ ಎಂದು ಹೇಳುವ ಸಮಯದಲ್ಲಿ ನಾನು ಮತ್ತು ನನ್ನ ಅಣ್ಣ ಮಾತ್ರ ಇದ್ದೇವು. ನಾನು ನನ್ನ ಅಣ್ಣ ನಂಜನಗೂಡಿನಲ್ಲಿ ವಾಸವಾಗಿದ್ದೇವೆ. ನಾನು ವ್ಯವಸಾಯ ಮಾಡುವುದಿಲ್ಲ ಎಂದರೆ ಸರಿಯಲ್ಲ. ತೀರ್ಪುಋಣಿಗಳು ನನ್ನ ಜಮೀನಿನೊಳಗೆ ನುಗ್ಗಿ ರೂ. 10,000/- ನಷ್ಟ ಉಂಟುಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳ ಮಾಡುವ

ಸಮಯದಲ್ಲಿ ಸಿದ್ದಪ್ಪ ಮತ್ತು ಮಲ್ಲಪ್ಪ ಬಂದು ಜಗಳ ಬಿಡಿಸಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ತಿಳಿಸಿರುವ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ತೀರ್ಪುಋಣಿಗಳು ನ್ಯಾಯಾಲಯದ ಆದೇಶವನ್ನು ಉಲಂಘಿಸಿಲ್ಲ ಎಂದರೆ ಸರಿಯಲ್ಲ. ತೀರ್ಪುಋಣಿಗಳ ಮೇಲೆ ಹಠಕ್ಕೆ ಬಿದ್ದು ಜಿದ್ದು ಸಾಧಿಸುತ್ತಿರುವುದರಿಂದ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾಧಂ,**
**ನಂಜನಗೂಡು**